**ಕರ್ನಾಟಕವಿಧಾನಪರಿಷತ್ತು**

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 739 (745)

2) ಸದಸ್ಯರ ಹೆಸರು : ಶ್ರೀ ತಿಪ್ಪಣ್ಣಪ್ಪ ಕಮಕನೂರು (ವಿಧಾನಸಭೆಯಿಂದ ಚುನಾಯಿತರಾದವರು)

3) ಉತ್ತರಿಸಬೇಕಾದ ದಿನಾಂಕ: : 10.03.2026

4) ಉತ್ತರಿಸುವ ಸಚಿವರು : ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಪ್ರಸ್ತುತ ಪ್ರಗತಿಯಲ್ಲಿರುವ ಹೊಸ ರೈಲ್ವೆ ಮಾರ್ಗಗಳು, ಹಳಿ ಜೋಡಿ ಮಾರ್ಗ (Doubling) ಮತ್ತು ವಿದ್ಯುದೀಕರಣ ಯೋಜನೆಗಳು ಯಾವುವು; (ಯೋಜನೆವಾರು ವಿವರ ನೀಡುವುದು) | **<u>ನೂತನ ರೈಲು ಮಾರ್ಗ ಯೋಜನೆಗಳು:</u>**<br>ಪ್ರಸ್ತುತ ರಾಜ್ಯದಲ್ಲಿ 9 ನೂತನ ರೈಲು ಮಾರ್ಗ ಯೋಜನೆಗಳು ಪ್ರಗತಿಯಲ್ಲಿರುತ್ತದೆ. ಈ ಯೋಜನೆವಾರು ವಿವರ ಈ ಕೆಳಕಂಡಂತಿದೆ.<br>1. ತುಮಕೂರು - ರಾಯದುರ್ಗ ನೂತನ ರೈಲು ಮಾರ್ಗ ಯೋಜನೆ<br>2. ಗಿಣಿಗೇರಾ – ರಾಯಚೂರು ನೂತನ ರೈಲು ಮಾರ್ಗ ಯೋಜನೆ<br>3. ಬಾಗಲಕೋಟೆ – ಕುಡಚಿ ನೂತನ ರೈಲು ಮಾರ್ಗ ಯೋಜನೆ<br>4. ಗದಗ – ವಾಡಿ ನೂತನ ರೈಲು ಮಾರ್ಗ ಯೋಜನೆ<br>5. ತುಮಕೂರು – ಚಿತ್ರದುರ್ಗ – ದಾವಣಗೆರೆ ನೂತನ ರೈಲು ಮಾರ್ಗ ಯೋಜನೆ<br>6. ಚಿಕ್ಕಮಗಳೂರು – ಬೇಲೂರು ನೂತನ ರೈಲು ಮಾರ್ಗ ಯೋಜನೆ<br>7. ಶಿವಮೊಗ್ಗ- ಶಿಕಾರಿಪುರ – ರಾಣೆಬೆನ್ನೂರು ನೂತನ ರೈಲು ಮಾರ್ಗ ಯೋಜನೆ<br>8. ಧಾರವಾಡ – ಬೆಳಗಾವಿ ನೂತನ ರೈಲು ಮಾರ್ಗ ಯೋಜನೆ<br>9. ಬೇಲೂರು – ಹಾಸನ ನೂತನ ರೈಲು ಮಾರ್ಗ ಯೋಜನೆ.<br>**<u>ರೈಲ್ವೆ ದ್ವಿಪಥೀಕರಣ ಯೋಜನೆಗಳು:</u>**<br>1. ಬೈಯಪ್ಪನಹಳ್ಳಿ – ಹೊಸೂರು ದ್ವಿಪಥೀಕರಣ ಯೋಜನೆ (48 ಕಿ.ಮೀ).<br>2. ಯಶವಂತಪುರ – ಚನ್ನಸಂದ್ರ ದ್ವಿಪಥೀಕರಣ ಯೋಜನೆ (21.7 ಕಿ.ಮೀ).<br>**ವಿದ್ಯುದೀಕರಣ ಯೋಜನೆಗಳ** ವಿವರಗಳನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |
| (ಆ) | ಈ ಯೋಜನೆಗಳ ಪೈಕಿ ಎಷ್ಟು ಯೋಜನೆಗಳಿಗೆ ರಾಜ್ಯ ಸರ್ಕಾರವು ಭೂಸ್ವಾಧೀನ ಪಡಿಸಿಕೊಡಬೇಕಿದೆ; ಮತ್ತು ಪ್ರಸ್ತುತ ಎಷ್ಟು ಎಕರೆ ಭೂಸ್ವಾಧೀನ ಪ್ರಕ್ರಿಯೆ ಬಾಕಿ ಉಳಿದಿದೆ; | ಪ್ರಸ್ತುತ ರಾಜ್ಯ ಸರ್ಕಾರದಿಂದ ಮೇಲಿನ 9 ನೂತನ ರೈಲು ಮಾರ್ಗ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಸದರಿ ಯೋಜನೆಗಳಿಗೆ ಅಗತ್ಯವಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ರೈಲ್ವೆ ಇಲಾಖೆಗೆ ಹಸ್ತಾಂತರಿಸುವ ಹೊಣೆಗಾರಿಕೆಯನ್ನು ರಾಜ್ಯ ಸರ್ಕಾರವು ಹೊಂದಿದೆ. ಈ ಯೋಜನೆಗಳಿಗೆ ಒಟ್ಟು ಅಗತ್ಯವಿರುವ ಭೂಮಿ 16914.00 ಎಕರೆಗಳು. ಈಗಾಗಲೇ ಸ್ವಾಧೀನಪಡಿಸಿಕೊಂಡಿರುವ ಭೂಮಿ 14,120.97 ಎಕರೆಗಳು. ಭೂಸ್ವಾಧೀನ ಪ್ರಕ್ರಿಯೆಗಾಗಿ ಬಾಕಿ ಉಳಿದಿರುವ ಭೂಮಿ 2793.03 ಎಕರೆಗಳು. ಬಾಕಿ ಉಳಿದಿರುವ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ. |

<table>
<tr>
<td>(ಇ)</td>
<td>ರೈಲ್ವೆ ಯೋಜನೆಗಳಿಗೆ ರಾಜ್ಯ ಸರ್ಕಾರವು ನೀಡಬೇಕಾದ ಆರ್ಥಿಕ ವಂತಿಗೆ (Financial Contribution) ಎಷ್ಟು; ಕಳೆದ ಮೂರು ವರ್ಷಗಳಲ್ಲಿ ಈ ಬಾಬ್ತಿನಲ್ಲಿ ಬಿಡುಗಡೆ ಮಾಡಲಾದ ಮತ್ತು ಬಾಕಿ ಇರುವ ಅನುದಾನದ ಮೊತ್ತ ಎಷ್ಟು;</td>
<td>ರೈಲ್ವೆ ಯೋಜನೆಗಳಿಗಾಗಿ ರಾಜ್ಯ ಸರ್ಕಾರದಿಂದ ಕಳೆದ 3 ವರ್ಷಗಳಲ್ಲಿ ಬಿಡುಗಡೆ ಮಾಡಲಾದ ಅನುದಾನದ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ. ಸಂ.</th><th>ವರ್ಷ ವಾರು</th><th>ಲೆಕ್ಕಶೀರ್ಷಿಕೆ</th><th>ಒದಗಿಸಲಾದ ಅನುದಾನ</th><th>ಬಿಡುಗಡೆ ಯೊದ ಅನುದಾನ</th></tr>
<tr><td rowspan="3">1.</td><td rowspan="3">2023-24</td><td>5465-01-190-3-05-132 ಹೊಸ ಯೋಜನೆಗಳ ವೆಚ್ಚ ಹಂಚಿಕೆ- ಬಂಡವಾಳ ವೆಚ್ಚಗಳು.</td><td>350.00</td><td>349.42</td></tr>
<tr><td>5465-01-190-3-05-145 – ರೈಲ್ವೆ ಯೋಜನೆಗಳ ವೆಚ್ಚ ಹಂಚಿಕೆ – ಭೂಸ್ವಾಧೀನ</td><td>278.32</td><td>278.32</td></tr>
<tr><td>5465-01-190-3-04-211 - ಕೆ-ರೈಡ್ ರಸ್ತೆ ಮೇಲ್ಸೇತುವೆ / ಕೆಳಸೇತುವೆ ಯೋಜನೆಗಳ ಹೂಡಿಕೆ</td><td>50.00</td><td>25.00</td></tr>
<tr><td rowspan="3">2.</td><td rowspan="3">2024-25</td><td>5465-01-190-3-05-132 ಹೊಸ ಯೋಜನೆಗಳ ವೆಚ್ಚ ಹಂಚಿಕೆ – ಬಂಡವಾಳ ವೆಚ್ಚಗಳು.</td><td>350.00</td><td>344.30</td></tr>
<tr><td>5465-01-190-3-05-145 – ರೈಲ್ವೆ ಯೋಜನೆಗಳ ವೆಚ್ಚ ಹಂಚಿಕೆ – ಭೂಸ್ವಾಧೀನ</td><td>250.00</td><td>225.00</td></tr>
<tr><td>5465-01-190-3-04-211 - ಕೆ-ರೈಡ್ ರಸ್ತೆ ಮೇಲ್ಸೇತುವೆ / ಕೆಳಸೇತುವೆ ಯೋಜನೆಗಳ ಹೂಡಿಕೆ</td><td>50.00</td><td>22.39</td></tr>
<tr><td rowspan="3">3.</td><td rowspan="3">2025-26</td><td>5465-01-190-3-05-132 ಹೊಸ ಯೋಜನೆಗಳ ವೆಚ್ಚ ಹಂಚಿಕೆ- ಬಂಡವಾಳ ವೆಚ್ಚಗಳು.</td><td>350.00</td><td>350.00</td></tr>
<tr><td>5465-01-190-3-05-145 – ರೈಲ್ವೆ ಯೋಜನೆಗಳ ವೆಚ್ಚ ಹಂಚಿಕೆ – ಭೂಸ್ವಾಧೀನ</td><td>250.00</td><td>250.00</td></tr>
<tr><td>5465-01-190-3-04-211 - ಕೆ-ರೈಡ್ ರಸ್ತೆ ಮೇಲ್ಸೇತುವೆ / ಕೆಳಸೇತುವೆ ಯೋಜನೆಗಳ ಹೂಡಿಕೆ</td><td>50.00</td><td>25.91</td></tr>
</table>
<br>
ಪ್ರಸ್ತುತ ರಾಜ್ಯದಲ್ಲಿ ಪ್ರಗತಿಯಲ್ಲಿರುವ 9 ನೂತನ ರೈಲು ಮಾರ್ಗ ಯೋಜನೆಗಳ ಅಂದಾಜು ವೆಚ್ಚ ರೂ.12147.00 ಕೋಟಿಗಳು. ಇದರಲ್ಲಿ ರಾಜ್ಯ ಸರ್ಕಾರದ ಪಾಲಿನ ಮೊತ್ತದಲ್ಲಿ ನಿರ್ಮಾಣಕ್ಕಾಗಿ ಈವರೆಗೆ ರೂ.2681.67 ಕೋಟಿಗಳನ್ನು ರೈಲ್ವೆ ಇಲಾಖೆಗೆ ಬಿಡುಗಡೆ ಮಾಡಲಾಗಿದೆ. ಈ ಯೋಜನೆಗಳಿಗೆ ಅಗತ್ಯವಿರುವ ಭೂಸ್ವಾಧೀನಕ್ಕಾಗಿ ರೂ.3012.66 ಕೋಟಿಗಳನ್ನು ಸಂಬಂಧಪಟ್ಟ ಜಿಲ್ಲಾಡಳಿತ / ಕೆಐಎಡಿಬಿಗೆ ಬಿಡುಗಡೆ ಮಾಡಲಾಗಿದೆ. ಬಾಕಿ ರೂ.3075.60 ಕೋಟಿಗಳನ್ನು ನಿರ್ಮಾಣ ಕಾಮಗಾರಿಗಾಗಿ ನೈರುತ್ಯ ರೈಲ್ವೆಗೆ ಬಿಡುಗಡೆ ಮಾಡಬೇಕಾಗಿದೆ.</td>
</tr>
<tr>
<td>(ಈ)</td>
<td>ಭೂಸ್ವಾಧೀನ ವಿಳಂಬ ಅಥವಾ ರಾಜ್ಯ ಸರ್ಕಾರದ ಪಾಲಿನ ಅನುದಾನದ ಕೊರತೆಯಿಂದಾಗಿ ಯಾವುದಾದರೂ ಯೋಜನೆಗಳು ಸ್ಥಗಿತಗೊಂಡಿವೆಯೇ ಅಥವಾ ವಿಳಂಬವಾಗುತ್ತಿವೆಯೇ; ಇದ್ದಲ್ಲಿ, ಅಂತಹ ಯೋಜನೆಗಳನ್ನು ಪೂರ್ಣಗೊಳಿಸಲು ಸರ್ಕಾರ ನಿಗದಿಪಡಿಸಿರುವ ಕಾಲಮಿತಿ ಏನು;</td>
<td>ರಾಜ್ಯ ಸರ್ಕಾರದಿಂದ 9 ನೂತನ ರೈಲು ಮಾರ್ಗ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಎಲ್ಲಾ ಯೋಜನೆಗಳು ಪ್ರಸ್ತುತ ಪ್ರಗತಿಯ ಹಂತದಲ್ಲಿವೆ. ಈ ಯೋಜನೆಗಳಿಗಾಗಿ ರಾಜ್ಯ ಸರ್ಕಾರದ ಪಾಲಿನ ಅನುದಾನವನ್ನು ಭೂಸ್ವಾಧೀನ ಪ್ರಾಧಿಕಾರದಿಂದ ಸ್ವೀಕೃತವಾಗುವ ಬೇಡಿಕೆ ಅನುಸಾರ ಬಿಡುಗಡೆ ಮಾಡಲಾಗುತ್ತಿದೆ.</td>
</tr>
</table>

(ಉ) ಬೆಂಗಳೂರು ಉಪನಗರ ರೈಲು ಯೋಜನೆ (Bengaluru Suburban Rail Project) ಸೇರಿದಂತೆ ರಾಜ್ಯದ ಪ್ರಮುಖ ರೈಲ್ವೆ ಯೋಜನೆಗಳ ಪ್ರಸ್ತುತ ಭೌತಿಕ ಪ್ರಗತಿ ಎಷ್ಟು?

**ಬೆಂಗಳೂರು ಉಪನಗರ ರೈಲು ಯೋಜನೆ:**

ಜುಲೈ -2025 ರಲ್ಲಿ M/s L&T ಒಪ್ಪಂದವನ್ನು ಕೊನೆಗೊಳಿಸಿದ ನಂತರ ಕಾರಿಡಾರ್-2 ಬಾಕಿ ಕಾಮಗಾರಿಯನ್ನು ದಿನಾಂಕ: 04.11.2025 ರಂದು 3 ಪ್ಯಾಕೇಜ್‌ಗಳಲ್ಲಿ ಮರುಟೆಂಡರ್ ಮಾಡಲಾಗಿದೆ. ಬಿಡ್ ಗಳು ದಿನಾಂಕ: 05.02.2026 ರಂದು ತೆರೆಯಲ್ಪಟ್ಟಿವೆ ಮತ್ತು ಮಾರ್ಚ್-2026 ರೊಳಗೆ ನೀಡುವ ನಿರೀಕ್ಷೆಯಿದೆ. ಕಾರಿಡಾರ್-2ರಲ್ಲಿ ಭೂಸ್ವಾಧೀನ ಪೂರ್ಣಗೊಂಡಿದೆ ಮತ್ತು ಕಾರಿಡಾರ್-4 ರ ಭೂಸ್ವಾಧೀನ 100% ಜೂನ್ -2026 ರೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಭೂಸ್ವಾಧೀನದಲ್ಲಿನ ಗಣನೀಯ ಪ್ರಗತಿಯನ್ನು ಅವಲಂಬಿಸಿ ಕಾರಿಡಾರ್- 4 ಕ್ಕೆ ಟೆಂಡರ್ ಕರೆಯಲಾಗುತ್ತದೆ. ಕಾರಿಡಾರ್ - 2 ಮತ್ತು 4 ರಲ್ಲಿ 30 ನಿಲ್ದಾಣಗಳ ನಿಲ್ದಾಣ ನಿರ್ಮಾಣ ಕಾಮಗಾರಿಗಳನ್ನು 4 ಪ್ಯಾಕೇಜ್‌ಗಳಲ್ಲಿ ಮಂಜೂರು ಮಾಡಲಾಗಿದೆ ಮತ್ತು ಕಾಮಗಾರಿಗಳು ಪ್ರಗತಿಯಲ್ಲಿವೆ.

ರಾಜ್ಯದಲ್ಲಿನ 9 ನೂತನ ರೈಲು ಮಾರ್ಗ ಯೋಜನೆಗಳ ಪ್ರಸ್ತುತ ಭೌತಿಕ ಪ್ರಗತಿ:

| ಕ್ರ. ಸಂ | ಯೋಜನೆ | ಅಗತ್ಯವಿರುವ ಜಮೀನು | ಸ್ವಾಧೀನಪಡಿಸಿಕೊಂಡಿರುವ ಜಮೀನು | ಬಾಕಿ ಇರುವ ಜಮೀನು | ಕಾಮಗಾರಿಯ ಭೌತಿಕ ಪ್ರಗತಿ (%) |
|---|---|---|---|---|---|
| 1 | ಗಿಣಿಗೇರಾ - ರಾಯಚೂರು | 2425 | 2425 | 0 | 66% |
| 2 | ತುಮಕೂರು-ರಾಯದುರ್ಗ | 1395.34 | 1395.34 | 0 | 70% |
| 3 | ಚಿಕ್ಕಮಗಳೂರು-ಬೇಲೂರು | 323.12 | 323.12 | 0 | 85% |
| 4 | ಬಾಗಲಕೋಟೆ-ಕುಡಚಿ | 2548.22 | 2,436.16 | 112.06 | 38% |
| 5 | ಗದಗ-ವಾಡಿ | 4335.21 | 4,079.03 | 256.18 | 29% |
| 6 | ತುಮಕೂರು-ದಾವಣಗೆರೆ | 2470.35 | 2,330 | 140.35 | 18% |
| 7 | ಬೇಲೂರು-ಹಾಸನ | 546.15 | 4.11 | 542.04 | - |
| 8 | ಶಿವಮೊಗ್ಗ-ಶಿಕಾರಿಪುರ-ರಾಣೆಬೆನ್ನೂರು | 1346.20 | 1,127.01 | 219.19 | 11.5% |
| 9 | ಧಾರವಾಡ-ಬೆಳಗಾವಿ | 1523.21 | 0 | 1523.21 | - |
| | **ಒಟ್ಟು** | **16914.00** | **14122.17** | **2793.03** | |

**ಸಂಖ್ಯೆ: ಮೂಅಇ 55 ರಾರಾಹೆ 2026**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕಾ
ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

7

ಅನುಬಂಧ

**SOUTH WESTERN RAILWAY**

**CONSTRUCTION UNIT /SWR**

**Karnataka Legislative Council Unstarred Question No.745(739) tabled by Shri Thippannappa Kamakanoor (Elected from the Legislative Assembly)**

**Status of Electrification Projects in Karnataka"**

| SL | Name of the project | Status of Electrification |
|---|---|---|
| 1 | Rayadurga - Tumkur via Kalyandurga | Electrification works are in progress with Civil works |
| 2 | Chikmagalur- Belur | Electrification works are in progress with Civil works |
| 3 | Marikuppam-Kupam (23.7km) | Electrification works are in progress with Civil works |
| 4 | Tumkur-Chirtadurga-Davangere | Electrification works are in progress with Civil works |
| 5 | Ginigera Raichur | Electrification works are in progress with Civil works |
| 6 | Shimoga - Shikaripura - Ranebennur (Umbrella Work) (103km) | Electrification works are in progress with Civil works |

Note: Any further details may be obtained from the project executives.